ಗೌರವಾನ್ವಿತ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ

ನ್ಯಾಯಾಲಯ ಟಿ.ನರಸೀಪುರ

ಅಸಲು ದಾವಾ ಸಂಖ್ಯೆ: 64 / 2022

ವಾದಿ : ಶ್ರೀ ರಾಚನಾಯಕ

ವಿರುದ್ಧ

ಪ್ರತಿವಾದಿಗಳು : ಶ್ರೀ ಸಿದ್ದನಾಯಕ ಮತ್ತು ಇತರರು

**1ನೇ ಪ್ರತಿವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕ**

ಹೆಸರು : ಶ್ರೀ ಸಿದ್ದನಾಯಕ

ವಯಸ್ಸು : ಸುಮಾರು 69 ವರ್ಷ

ತಂದೆಯ ಹೆಸರು : ಲೇಟ್ ದೇವನಾಯಕ

ವೃತ್ತಿ : ವ್ಯವಸಾಯ

ವಾಸ : ಅಕ್ಕೂರು ಗ್ರಾಮ, ತಲಕಾಡು ಹೋಬಳಿ

ಟಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ

ನಾನು ಶ್ರೀ ಸಿದ್ದನಾಯಕ ಸುಮಾರು 69 ವರ್ಷ ವಯಸ್ಸು ಬಿನ್ ಲೇಟ್ ದೇವನಾಯಕ, ಅಕ್ಕೂರು ಗ್ರಾಮ, ತಲಕಾಡು ಹೋಬಳಿ, ಟಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ, ಪ್ರಕರಣದ 1ನೇ ಪ್ರತಿವಾದಿ ದೇವರ ಹೆಸರಿನಲ್ಲಿ ಪ್ರಮಾಣೀಕರಿಸಿ ಹೇಳುವುದೇನೆಂದರೆ:

1. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ವಾದಿಯರು ತಂದಿರುವ ಪ್ರಸ್ತುತ ದಾವೆಯು ಕಾನೂನಿನ ಅನ್ವಯವಾಗಲಿ ಅಥವಾ ವಾಸ್ತವಾಂಶದ ಅಡಿಯಲ್ಲಿಯಾಗಲಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಸದರಿ ದಾವೆಯು ವಜಾಗೊಳಿಸಲು ಯೋಗ್ಯವಾದ ದಾವೆಯಾಗಿರುತ್ತದೆ. ನಾನು ಪ್ರತಿವಾದಿ 2ರ ಪರವಾಗಿಯೂ ಸಹ ಸಾಕ್ಷಿ ನೀಡುತ್ತಿದ್ದೇನೆ.

2. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿಯು ಪ್ರಸ್ತುತ ದಾವೆಯನ್ನು ಶುದ್ಧ ಹಸ್ತದಿಂದ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ. ವಾದಿಯು ಹಲವಾರು ವಿಚಾರಗಳನ್ನು ಮತ್ತು ಸಂಗತಿಗಳನ್ನು ಮರೆಮಾಚಿ ಘನ ನ್ಯಾಯಾಲಯದಲ್ಲಿ ಸುಳ್ಳು ಮಾಹಿತಿಯನ್ನು ನೀಡಿ ಸಲ್ಲಿಸಿರುತ್ತಾರೆ. ಆದುದರಿಂದ ವಾದಿಯ ದಾವೆಯು ಈ ಹಂತದಲ್ಲಿಯೇ ವಜಾಗೊಳ್ಳಲು ಯೋಗ್ಯವಾಗಿರುತ್ತದೆ.

3. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಪ್ರತಿವಾದಿಗಳ ಕುಟುಂಬದಲ್ಲಿ ಈಗಾಗಲೇ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಟಿ.ನರಸೀಪುರ ಇಲ್ಲಿ ಅಸಲು ದಾವಾ ಸಂಖ್ಯೆ 25/2014 ರೀತ್ಯ ಭಾಗಾಂಶದ ದಾವೆ ಸಲ್ಲಿಸಿದ್ದು ಸದರಿ ದಾವೆಯು ದಿನಾಂಕ 31.1.2015 ರಂದು ರಾಜೀ ಮೂಲಕ ಇತ್ಯರ್ಥವಾಗಿ ಟಿ. ನಸರೀಪುರ ತಾಲ್ಲೂಕು ತಲಕಾಡು ಹೋಬಳಿ ಹಕ್ಕೂರು ಗ್ರಾಮದ ಸರ್ವೆ ನಂ. 25/1ರಲ್ಲಿನ 1 ಎಕರೆ 5 ಗುಂತೆ ಜಮೀನಿಗೆ

No of Corrections NIL

ಸಂಬಂಧಿಸಿದಂತೆ ಅಂತಿಮ ಡಿಕ್ರಿ ಆದೇಶವಾಗಿದ್ದು ಸದರಿ ಆದೇಶವನ್ನು ಪ್ರಶ್ನಿಸದೇ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ವಾದಿಯ ದಾವೆಯು ಊರ್ಜಿತವಾಗತಕ್ಕದಲ್ಲ.

4. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿಯು ವಾದಪತ್ರದ 2ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳಾದ ದಾವಾ ಷೆಡ್ಯೂಲ್ ಪಿತ್ರಾರ್ಜಿತ ಆಸ್ತಿಯಾಗಿದ್ದು ಸದರಿ ಸ್ವತ್ತು ವಾದಿ ಮತ್ತು ಅವರ ಸಹೋದರರನಾದ ಮಹದೇವನಾಯಕರವರೊಂದಿಗೆ ಮಾಡಿಕೊಂಡ ವಿಭಾಗದ ಅನ್ವಯ ಎಂ.ಆರ್.ನಂ. 44/2000-01 ರಂತೆ ವಾದಿಯ ಹೆಸರಿಗೆ ಖಾತೆ ಅಂಗೀಕರವಾಗಿರುತ್ತದೆ ಎನ್ನುವುದು ಶುದ್ಧ ಸುಳ್ಳಿನಿಂದ ಕೂಡಿದ್ದು ಸದರಿ ಆಸ್ತಿಯು ವಾದಿಯ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ. ವಾದಿಯು ಸದರಿ ಅಂಶವನ್ನು ದಾಖಲೆಗಳ ಸಮೇತ ರುಜುವಾತು ಪಡಿಸಬೇಕಾಗಿರುತ್ತದೆ.

3. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿಯು ವಾದ ಪತ್ರದ 3ನೇ ಖಂಡಿಕೆಯಲ್ಲಿ ತಿಳಿಸಿರುವ ವಿಷಯಗಳಾದ ಅಂದರೆ ಸದರಿ ಷೆಡ್ಯೂಲ್ ಸ್ವತ್ತಿನ ಎಂ.ಆರ್.ನಂ.44/2000-01 ರಂತೆ ವಾದಿಯ ಹೆಸರಿಗೆ ಖಾತೆ ನಮೂದಾದ ನಂತರ ದಾವಾ ಷೆಡ್ಯೂಲ್ ಸ್ವತ್ತಿಗೆ ಕಂದಾಯ ಪಾವತಿಸಿ ಬರುವ ಮೂಲಕ ವಾದಿಯ ಷೆಡ್ಯೂಲ್ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ ಮತ್ತು ಸದರಿ ಸ್ವತ್ತಿಗೆ ನಿಗಧಿತವಾಗಿ ಕಂದಾಯವನ್ನು ಪಾವತಿ ಬರುತ್ತಿದ್ದು, ದಾವಾ ಷೆಡ್ಯೂಳ್ ಸ್ವತ್ತು ಮೊದಲು ಸರ್ವೆ ನಂ. 25/2 ಎಂದು ನಮೂದಾಗಿದ್ದು ತದನಂತರದಲ್ಲಿ ಷೆಡ್ಯೂಲ್ ಸ್ವತ್ತನ್ನು ಸರ್ವೆ ಇಲಾಖೆಯಲ್ಲಿ ಭೂ ಮಾಪಕರು ಅಳತೆಯನ್ನು ಮಾಡಿಸಿದನಂತರ ಸರ್ವೆ ನಂ. 25/1 ರಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುವ ವಿಷಯ ತಿಳಿದುಬಂದು ಅದರಂತೆ ಸರ್ವೆ ನಂ. 25/1ಕ್ಕೆ ಎಂ.ಆರ್.ನಂ.33/2010-11 ರ ರೀತ್ಯಾ ಖಾತೆ ಮತ್ತು ರೆವೆನ್ಯೂ ದಾಖಲೆ ನಮೂದಾಗಿರುತ್ತದೆ, ಸರ್ವೆ ನಂಬರಿನಲ್ಲಿ ಪೋಡು ಮಾತ್ರ ಬದಲಾವಣೆ ಆಗಿರುತ್ತದೆ, ಷೆಡ್ಯೂಲ್ ಸ್ವತ್ತು ವಾದಿಯ ಪೂರ್ವ ಕಾಲದಿಂದಲೂ ಇದ್ದ ಚೆಕ್ಕು ಬಂದಿಯಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ ಎನ್ನುವ ಎಲ್ಲಾ ಅಂಶಗಳು ಶುದ್ಧ ಸುಳ್ಳಿನಿಂದ ಕೂಡಿದ್ದು ವಾದಿಯು ಸೃಷ್ಟಿರುವಂತಹ ಅಂಶಗಳಾಗಿರುತ್ತದೆ.

4. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ವಾದಿಯು ತಮ್ಮ ವಾದಪತ್ರದ ಖಂಡಿಕೆ -4ರಲ್ಲಿ ಹೇಳಿರುವ ಅಂಶಗಳು ಅಂದರೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳಿರುವುದಿಲ್ಲ, ಈ ವಿಚಾರವಾಗಿ ವಾದಿಯು ಗ್ರಾಮಸ್ಥರ ಗಮನಕ್ಕೆ ತಂದು ಹಲವಾರು ಬಾರಿ ಪಂಚಾಯಿತಿ ನಡೆಸಿರುತ್ತಾರೆ, ಆದರೆ ಪ್ರತಿವಾದಿಗಳು ಪಂಚಾಯಿತಿದಾರರ ತಿಳುವಳಿಗೆಯನ್ನೂ ಸಹ ಕಡೆಗಾಣಿಸಿ ಪದೇ ಪದೇ ವಾದಿಯು ಸ್ವಾಧೀನಾನುಭ ವದಲ್ಲಿರುವ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ವಾದಿಯು ಮಾಡುತ್ತಿರುವ ವ್ಯವಸಾಯಕ್ಕೆ ತೊಂದರೆ ಕೊಡುತ್ತಿರುತ್ತಾರೆ, ಇದರಿಂದ ವಾದಿಯ ಸ್ವತ್ತಿನ

NOTARY
LINGANNA. N.L.
T. NARASIPURA
REVENUE TALUK
MYSURU DIST.
Law. LC/174/2022
KARNATAKA

ಬೆಳೆಗಳಿಗೆ ತೊಂದರೆಯನ್ನುಂಟು ಮಾಡುತ್ತಿರುತ್ತಾರೆ ಎಂಬ ಎಲ್ಲಾ ಅಂಶಗಳೂ ಸುಳ್ಳಿನಿಂದ ಕೂಡಿರುತ್ತದೆ. ವಾದಿಯು ಎಂದೂ ಸಹ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಬದಲಾಗಿ ಈ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿ ವ್ಯವಸಾಯ ಮಾಡುತ್ತಿರುತ್ತಾರೆ. ವಾದಿಯು ಮೇಲ್ಕಂಡ ಎಲ್ಲಾ ಅಂಶಗಳನ್ನು ದಾಖಲೆಗಳ ಸಮೇತ ಕಟ್ಟುನಿಟ್ಟಾಗಿ ರುಜುವಾತು ಪಡಿಸಬೇಕಾಗಿರುತ್ತದೆ.

5. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ವಾದಿಯು ತಮ್ಮ ವಾದಪತ್ರದ ಖಂಡಿಕೆ -5ರಲ್ಲಿ ಹೇಳಿರುವಂತೆ ಪ್ರತಿವಾದಿಗಳಿಗೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಸಂಬಂಧವಾಗಲೀ ಅಥವಾ ಹಕ್ಕು ಮತ್ತು ಬಾಧ್ಯತೆ ಇರುವುದಿಲ್ಲ, ಪ್ರತಿವಾದಿಗಳು ಷೆಡ್ಯೂಲ್ ಸ್ವತ್ತಿನ ಬಾಜುದಾರರು ಸಹ ಆಗಿರುವುದಿಲ್ಲ, ಆದರೂ ಸಹ ಪ್ರತಿವಾದಿಗಳು ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಉಂಟು ಮಾಡುತ್ತಿರುತ್ತಾರೆ, ಈ ಬಗ್ಗೆ ವಾದಿಯು ಪ್ರತಿವಾದಿಗಳ ವಿರುದ್ಧ ಸಂಬಂಧಪಟ್ಟ ಪೋಲೀಸ್ ಠಾಣೆಗೆ ದೂರು ದಾಖಲಿಸಿದ್ದು ಅದರ ಸಿ.ಮಿಸ್. ನಂ. 19/2011, ಸಿ.ಮಿಸ್.ನಂ.243/12 ಮತ್ತು ಸಿ.ಮಿಸ್.ನಂ.228/2015 ರ ರೀತ್ಯಾ ದೂರು ದಾಖಲಾಗಿರುತ್ತದೆ, ಸದರಿ ಪೋಲೀಸಿನವರು ಪ್ರಕರಣವು ಸಿವಿಲ್ ಸ್ವರೂಪವಾದರಿಂದ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಳ್ಳುವಂತೆ ತಿಳಿಸಿರುತ್ತಾರೆ ಎಂಬುವ ಎಲ್ಲಾ ಅಂಶಗಳೂ ಸಹ ಶುದ್ಧ ಸುಳ್ಳಿನಿಂದ ಕೂಡಿದ್ದು ಈ ದಾವೆ ಸಲ್ಲಿಸಲು ವ್ಯಾಜ್ಯಕಾರಣಕ್ಕಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತಾರೆ.

6. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ವಾದಿಯೌ ತಮ್ಮ ವಾದಪತ್ರದ 6 ಮತ್ತು 7 ರಲ್ಲಿ ಹೇಳಿರುವ ಅಂಶಗಳೆಲ್ಲವೂ ಶುದ್ಧ ಸುಳ್ಳಿನಿಂದ ಕೂಡಿದ್ದು ವಾದಿಯು ಶಾಶ್ವತ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಲು ಯಾವುದೇ ವ್ಯಾಜ್ಯಕಾರಣವು ಇರುವುದಿಲ್ಲ ಮತ್ತು ಸದರಿ ಖಂಡಿಕೆಯಲ್ಲಿ ಹೇಳಿರುವ ವ್ಯಾಜ್ಯ ಕಾರಣವು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಈ ಘನ ನ್ಯಾಯಾಲಯವು ಪ್ರಸ್ತುತ ಪ್ರಕರಣವನ್ನು ನಡೆಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ವಾದಿಯು ಸಲ್ಲಿಸಿರುವ ನ್ಯಾಯಾಲಯದ ಶುಲ್ಕ ಪಟ್ಟಿ ಮತ್ತು ಪಾವತಿಸಿರುವ ಶುಲ್ಕ ಶುದ್ಧ ಸುಳ್ಳಿನಿಂದ ಕೂಡಿದ್ದು ವಾದಿಯು ತಮ್ಮ ವಾದಪದಲ್ಲಿ ಕೇಳಿರುವ ಯಾವುದೇ ಪರಿಹಾರಕ್ಕೂ ಮುಖ್ಯವಾಗಿ ಶಾಶ್ವತ ನಿರ್ಭಂದಕಾಜ್ಞೆ ಪಡೆಯಲು ಅರ್ಹರಾಗಿರುವುದಿಲ್ಲ. ಹಾಗಾಗಿ ವಾದಿಯ ದಾವೆಯು ವಜಾಗೊಳಿಸಲು ಯೋಗ್ಯವಾಗಿರುತ್ತದೆ.

7. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಪ್ರತಿವಾದಿಗಳ ಕುಟುಂಬದಲ್ಲಿ ನಂಜನಾಯಕ ರವರು ಖರ್ತನಾಗಿದ್ದು ಅವರ ಹೆಂಡತಿ ಖರಗಮ್ಮ ಆಗಿರುತ್ತಾರೆ. ಉಭಯತ್ರರು ಪೌತಿಯಾಗಿದ್ದು ಸದರಿಯವರಿಗೆ ನಾಲ್ಕು ಜನ ಮಕ್ಕಳಿದ್ದು ಅವರುಗಳೆಂದರೆ (1) ಲಿಂಗನಾಯಕ (2) ಬಸವ ನಾಯಕ (3) ದೇವನಾಯಕ (ಪ್ರತಿವಾದಿಗಳ ತಂದೆ) ಮತ್ತು (4) ಚಿಕ್ಕನಂಜನಾಯಕ ಆಗಿರುತ್ತಾರೆ.

NOTARY
LINGANNA. N.L.
T. NARASIPURA
REVENUE TALUK
MYSORE DIST
Expiry Date 3-3-2029
GOVERNMENT OF KARNATAKA

8. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು ತಲಕಾಡು ಹೋಬಳಿ ಹಕ್ಕೂರು ಗ್ರಾಮದ ಸರ್ವೆ ನಂ. 25/1 ಒಟ್ಟು 2 ಎಕರೆ 22 ಗುಂಟೆ ಜಮೀನು ಇದ್ದು ಸದರಿ ಜಮೀನಿನಲ್ಲಿ ಈ ಪ್ರತಿವಾದಿಗಳ ಕುಟುಂಬದ ಕರ್ತನಾದ ದಿ. ನಂಜನಾಯಕ ರವರು 1.05 ಎಕರೆ ಜಮೀನನ್ನು ದಿನಾಂಕ 20.7.1934 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಚಿಕ್ಕದ್ಯಾವರ ಗುಡ್ಡನ ಮಗ ಸಿದ್ದ ಎಂಬುವರಿಂದ ಖರೀದಿಸಿರುತ್ತಾರೆ. ಆದಿನವೇ ಸದರಿ ಜಮೀನಿನ ಸ್ವಾಧೀನವನ್ನೂ ಸಹ ಪಡೆದುಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದು ಆನಂತರ ಸದರಿ ಜಮೀನನ್ನು ಭೋಗ್ಯಕ್ಕೂ ಸಹ ನೀಡಿ ನಂತರ ಬಿಡಿಸಿಕೊಂಡಿರುತ್ತಾರೆ. ನಂತರದಲ್ಲಿ ನಂಜನಾಯಕ ಮರಣಹೊಂದಿದ್ದು ಅವರ ಮರಣಾನಂತರ ಅವರ ನಾಲ್ಕು ಜನ ಮಕ್ಕಳುಗಳಲ್ಲಿ ನಾಲ್ಕನೆಯ ಚಿಕ್ಕನಂಜನಾಯಕ ತನ್ನ ಜೀವಿತ ಕಾಲದಲ್ಲಿಯೇ ಮೇಲ್ಕಂಡ ನಂಜನಾಯ್ಕ ಖರೀದಿಸಿದ್ದಂತಹ 1.05 ಎಕರೆ ಜಮೀನಿನ ಪೈಕಿ 10 ಗುಂಟೆ ಜಮೀನನ್ನು ಶ್ರೀಮತಿ ನಂಜಮ್ಮ ಎಂಬುವವರಿಗೆ 29.4.1965 ರಲ್ಲಿ ಮತ್ತು 5 ಗುಂಟೆ ಜಮೀನನ್ನು ಶ್ರೀಮತಿ ಚಿಕ್ಕಮಾದಮ್ಮ ಎಂಬುವವರಿಗೆ ದಿನಾಂಕ 19.09.1965 ರಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸ.ನಂ.25/1 ರಲ್ಲಿ 15 ಗುಂಟೆ ಹೊರತುಪಡಿಸಿ ಉಳಿದ 30 ಗುಂಟೆ ಜಮೀನಿಗೆ ದಿ.ನಂಜನಾಯ್ಕನ ವಾರಸುದಾರರೆಲ್ಲರೂ ಹಕ್ಕುಳ್ಳವರಾಗಿರುತ್ತಾರೆ. ಈಗಲೂ ಸಹ ಸದರಿ 1.05 ಎಕರೆ ಜಮೀನಿನಲ್ಲಿ ಖರೀದಿದಾರರು ಮತ್ತು ಈ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ಮಾಡಿಕೊಂಡು ಜೀವನ ನಡೆಸಿರುತ್ತಾರೆ.

9. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ಸ.ನಂ. 25/1 ರ 1.05 ಎಕರೆ ಜಮೀನು ಪ್ರತಿವಾದಿಗಳ ಸ್ವಾಧೀನದಲ್ಲಿದ್ದು, ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಈ ಹಂತದಲ್ಲಿ ಉಪತಹಸೀಲ್ದಾರರು ತಲಕಾಡು ಹೋಬಳಿ ರವರು ವಾಸ್ತವಿಕವಾಗಿ ಯಾವುದೇ ಅಂಶಗಳನ್ನು ಪರಿಗಣಿಸದೇ ಮತ್ತು ಮೂಲ ಅನುಭವದಾರರ ಬಗ್ಗೆ ವಿಚಾರಣೆ ನಡೆಸದೇ ಒಂದು ವರದಿಯನ್ನು ನೀಡಿ ಸದರಿ ಸ.ನಂ.25/1 ಮತ್ತು ಅದರ ಪಕ್ಕದಲ್ಲೇ ಇರುವ ಸ.ನಂ. 25/2ರ ಜಮೀನುಗಳು ಅದಲು ಬದಲಾಗಿದ್ದು, ಸ.ನಂ.25/1ರ ಮಾಲೀಕರು ಸ.ನಂ.25/2 ರಲ್ಲಿ ವ್ಯವಸಾಯ ಮಾಡುತ್ತಿದ್ದು, ಸ.ನಂ.25/2 ರ ಮಾಲೀಕರು ಸ.ನಂ.25/1ರಲ್ಲಿ ವ್ಯವಸಾಯ ಮಾಡುತ್ತಿದ್ದು, ಆದರೆ ಮೂಲ ಸರ್ವೆ ನಂಬರುಗಳಲ್ಲಿಯೇ ಆರ್.ಟಿ.ಸಿ ಗಳಲ್ಲಿ ಮೂಲ ಖಾತೆದಾರರ ಹೆಸರುಗಳು ನಮೂದಾಗಿದ್ದು, ಕೇವಲ ಜಮೀನುಗಳು ಮಾತ್ರ ಅದಲು ಬದಲಾಗಿ ವ್ಯವಸಾಯ ಮಾಡುತ್ತಿದ್ದಾರೆ ಎಂಬುದಾಗಿ ನೀಡಿದ ವರದಿಯ ಆಧಾರದ ಮೇಲೆ ಮಾನ್ಯ ಉಪತಹಸೀಲ್ದಾರರು ಖಾತೆ ಬದಲಾವಣೆ ಮಾಡಿರುವುದಾಗಿ ತಿಳಿಸಿ ಅದರಂತೆ ವಾದಿಗಳು ಖಾತಾದಾರರಾಗಿರುವ ಸ.ನಂ. 25/1 ರ ಜಮೀನಿಗೆ ಸ.ನಂ.25/2ರ ಖಾತಾದಾರರಾಗಿಯೂ ಮತ್ತು ಸ.ನಂ.25/2 ರ ಜಮೀನಿಗೆ ಸ.ನಂ.25/1ರ

NOTARY
LINGANNA. M.L.
T. NARASIPURA
REVENUE TALUK
MYSURU DIST.
Reg. No. Law LCU/74/2022
Expiry Date: 3-3-2029
GOVERNMENT OF KARNATAKA

ಪ್ರತಿವಾದಿಗಳು ವರ್ಗಾವಣೆ ಮಾಡಿ ದಿನಾಂಕ 26.8.2010 ರಂದು ಎಂ.ಆರ್.ನಂ. 33/2010-11 ರ ರೀತ್ಯಾ ಅನುಭವದ ಆಧಾರದ ಮೇಲೆ ಎರಡೂ ಸರ್ವೆ ನಂಬರುಗಳಲ್ಲಿರುವ ಖಾತೆದಾರರ ಹೆಸರುಗಳನ್ನು ಆರ್.ಟಿ.ಸಿ ಯಲ್ಲಿ ನಮೂದಿ ಮಾಡಿ ಆದೇಶ ಮಾಡಿರುತ್ತಾರೆ.

10. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಮಧ್ಯೆ ಮೂಲ ಸ.ನಂ.25/1 ರಲ್ಲಿ ಮೂಲತ: 2 ಎಕರೆ 22 ಗುಂಟೆ ಜಮೀನಿದ್ದು ಅದರಲ್ಲೆ 1.05 ಎಕರೆ ಜಮೀನನ್ನು ಪ್ರತಿವಾದಿಗಳ ಕುಟುಂಬದ ಕರ್ತನಾದ ನಂಜನಾಯ್ಕ ಖರೀದಿಸಿದ್ದು ಅದರಲ್ಲಿ 15 ಗುಂತೆ ಜಮೀನು ನಂಜಮ್ಮ ಮತ್ತು ಚಿಕ್ಕಮಾದಮ್ಮನವರ ಹೆಸರಿನಲ್ಲಿ ಖಾತಾ ವರ್ಗಾವಣೆಯಾಗಿ ಅವರ ಹೆಸರಿನಲಿ ದಾಖಲಾಗಿದ್ದು ಉಳಿಕೆ 30 ಗುಂಟೆ ಜಮೀನು ದಿ.ನಂಜನಾಯ್ಕನ ಹೆಸರಿನಲ್ಲಿಯೇ ಮುಂದುವರೆದಿದ್ದು ಆದರೆ ಇದ್ದಕಿದ್ದಂತೆ 98-99 ನೇ ಸಾಲಿನಲ್ಲಿ ಶ್ರೀ ಮಾದನಾಯ್ಕ ಬಿನ್ ಲಿಂಗನಾಯ್ಕ ಹೆಸರು ಸ.ನಂ. 25/1 ರಲ್ಲಿ 2 ಎಕರೆ 7 ಗುಂಟೆ ಜಮೀನಿಗೆ ಐ ಎನ್ ಹೆಚ್ 3/98-99ರ ರೀತ್ಯಾ ದಿನಾಂಕ 2.8.1998 ರಂದು ತಹಸೀಲ್ದರರ ಕಛೇರಿಯಲ್ಲಿ ಸ.ನಂ.25/1ಕ್ಕೆ ಸೇರ್ಪಡೆಗೊಳಿಸಿರುತ್ತಾರೆ. ವಾಸ್ತವವಾಗಿ ಸ.ನಂ.25/1ರ ಯಾವುದೇ ದಾಖಲೆಯಲ್ಲಿ ಮೇಲ್ಕಂಡ ಐ ಎನ್ ಹೆಚ್ 3/98-99ರ ರೀತ್ಯಾ ಶ್ರೀ ಮಾದನಾಯ್ಕ ಬಿನ್ ಲಿಂಗನಾಯ್ಕ ಕುಟುಂಬದ ಯಾರೊಬ್ಬರ ಹೆಸರಿನಲ್ಲಿಯೂ ಸಹ ಖಾತೆ ದಾಖಲಾಗಿರುವುದಿಲ್ಲ. ಆದರೆ ತಹಸೀಲ್ದಾರರು ಏಕಾಏಕಿ ಯಾವುದೇ ದಾಖಲೆಗಳು ಮತ್ತು ಆಧಾರ ಇಲ್ಲದೇ ಶ್ರೀ ಮಾದನಾಯ್ಕ ಬಿನ್ ಲಿಂಗನಾಯ್ಕ ಹೆಸರನ್ನು ಸ.ನಂ.25/1 ರ ಜಮೀನಿಗೆ ಖಾತಾ ದಾಖಲು ಮಾಡಿರುವುದು ಕಾನೂನುಬಾಹಿರವಾಗಿದ್ದು, ಅದರ ಆಧಾರದ ಮೇಲೆ ಸ.ನಂ.25/1ರ ಖಾತಾದಾರರನ್ನು ಸ.ನಂ.25/2 ಕ್ಕೆ ವರ್ಗಾವಣೆ ಮಾಡುವ ಸಂದರ್ಭದಲ್ಲಿಯೂ ಸಹ ಈ ಯಾವ ಅಂಶಗಳನ್ನೂ ಸಹ ಪರಿಗಣಿಸದೆ ಮಾನ್ಯ ತಹಸೀಲ್ದಾರರವು ಸ.ನಂ. 25/2 ರಲ್ಲಿ 2 ಎಕರೆ 7 ಗುಂಟೆ ಜಮೀನಿಗೆ ಶ್ರೀ ಮಾದನಾಯ್ಕ ಬಿನ್ ಲಿಂಗನಾಯ್ಕ ಹೆಸರಿಗೆ ಖಾತಾ ವರ್ಗಾವಣೆ ಮಾಡಿ ಎಂ.ಆರ್.33/2010-11 ರ ರೀತ್ಯಾ ವಿಭಜನೆ ಮಾಡಿ ಆದೇಶಿಸಿರುವುದು ಕಾನೂನುಬಾಹಿರವಾಗಿದ್ದು ಸದರಿ ಅಂಶವು ಪ್ರತಿವಾದಿಗಳಿಗೆ ಆಗಸ್ಟ್ 2013 ರಂದು ಕಂದಾಯ ಪಾವತಿಸಲು ಹೋದಾಗ ಮೇಲ್ಕಂಡ ಅಂಶವು ಪ್ರತಿವಾದಿಗಳ ಗಮನಕ್ಕೆ ಬಂದಿದ್ದು ಕೂಡಲೇ ದಾಖಲಾತಿಗಳನ್ನು ಪರಿಶೀಲಿಸಲಾಗಿ ಮೇಲ್ಕಂಡ ಅಂಶ ಗಮನಕ್ಕೆ ಬಂದು ಅದನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ಮುಂದೆ ಆರ್.ಎ. ನಂ. 290/2013-14ರ ರೀತ್ಯಾ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯು ದಿನಾಂಕ 10.01.2022ರಂದು ವಜಾಗೊಂಡಿದ್ದು ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ರಿವಿಶನ್ ಅರ್ಜಿ ಸಂಖ್ಯೆ 105/2022 ರೀತ್ಯಾ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯು ವಿಚಾರಣಾ ಹಂತದಲ್ಲಿರುತ್ತದೆ.

NOTARY
LINGANNA N.L.
T NARASIPURA
REVENUE TALUK
MYSORE DIST
GOVERNMENT OF KARNATAKA

11. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಪ್ರತಿವಾದಿಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ದಿ.ನಂಜನಾಯ್ಕ ಮತ್ತು ಕರಗಮ್ಮನವರ 4ನೇ ಮಗನಾದ ದಿ.ಚಿಕ್ಕನಂಜನಾಯ್ಕನ ಹೆಂಡತಿ ಮತ್ತು ಮಗ ಅಂದರೆ ಶ್ರೀಮತಿ ನಂಜಮ್ಮ ಮತ್ತು ನಂಜನಾಯ್ಕ ಗೌರವಾನಿವತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಟಿನರಸೀಪುರ ದಲ್ಲಿ ಅಸಲು ದಾವಾ ಸಂಖ್ಯೆ 25/2014 ರೀತ್ಯ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ಈ ಪ್ರತಿವಾದಿಗಳನ್ನೂ ಸಹ ಪ್ರತಿವಾದಿಗಳನ್ನಾಗಿ ಮಾಡಿದ್ದು ಸದರಿ ದಾವೆಯು ರಾಜಿ ಸಂದಾನದ ಮೂಲಕ ಇತ್ಯರ್ಥ ವಾಗಿ ಸರ್ವೆ ನಂ. 25/1 ರ 1.05 ಎಕರೆ ಜಮೀನನ್ನು ಸದರಿ ದಾವೆಯ ವಾದಿ ಮತ್ತು ಪ್ರತಿವಾದಿಗಳು ಪರಸ್ಪರ ಹಂಚಿಕೆ ಮಾಡಿಕೊಂಡಿದ್ದು ಅದರಂತೆ ಘನ ನ್ಯಾಯಾಲಯವು ಅಂತಿಮ ಡಿಕ್ರಿ ಆದೇಶವನ್ನೂ ಸಹ ಹೊರಡಿಸಿರುತ್ತದೆ. ಈ ಎಲ್ಲ ಅಂಶಗಳು ವಾದಿಗೆ ತಿಳಿದಿದ್ದರೂ ಸಹ ಅವುಗಳನ್ನು ಮರೆಮಾಚಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಮೇಲ್ಕಂಡ ಓ.ಎಸ್. ನಂ. 25/2014 ಅಂತಿಮ ಡಿಕ್ರಿಯನ್ನು ಈ ವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಹಾಗಾಗಿ ವಾದಿಯು ತಂದಿರುವ ಈ ದಾವೆಯು ಊರ್ಜಿತವಾಗತಕ್ಕದಲ್ಲ.

12. ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ ಮೇಲ್ಕಂಡ ರೀತ್ಯಾ ವಾದಿಗಳು ಈ ಘನ ನ್ಯಾಯಾಲಯವನ್ನು ಶುದ್ಧ ಹಸ್ತದಿಂದ ಯಾಚಿಸಿರುವುದಿಲ್ಲ ಮತ್ತು ಈಗಾಗಲೇ ಬಾಕಿ ಇರುವ ಪ್ರಕರಣ ಮತ್ತು ಇತ್ಯಾರ್ಥಗೊಂಡಿರುವ ಅಂತಿಮ ಡಿಕ್ರಿ ಯ ಬಗ್ಗೆ ತಿಳಿದಿದ್ದರೂ ಸಹ ಯಾವುದೇ ಅಂಶಗಳನ್ನು ಈ ಘನ ನ್ಯಾಯಾಲಯದ ಮುಂದೆ ವಿವರಿಸಿರುವುದಿಲ್ಲ. ಹಾಗಾಗಿ ಸದರಿ ವಾದಿ ತಂದಿರುವ ದಾವೆಯು ವಜಾಗೊಳಿಸಲು ಅರ್ಹವಾಗಿರುತ್ತದೆ.

ಆದ್ದರಿಂದ ನಾನು ಈ ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿಯು ತಂದಿರುವ ದಾವೆಯನ್ನು ಖರ್ಚುಸಮೇತ ವಜಾ ಮಾಡಬೇಕೆಂದು ಅತ್ಯಂತ ನಮ್ರತೆಯಿಂದ ಗೌರವ ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ.

ಮೇಲೆ ಹೇಳಿರುವ ಎಲ್ಲಾ ಅಂಶಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆ ಎಂದು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುತ್ತಾ ಈ ದಿನ ಈ ಕೆಳಗೆ ಸಹಿ ಮಾಡಿರುತ್ತೇನೆ.

ನನ್ನಿಂದ ಗುರುತಿಸಲ್ಪಟ್ಟಿರುತ್ತದೆ

L M

ವಕೀಲರು

ಸಿದ್ದನಾಯಕ
ಪ್ರಮಾಣೀಕರಿಸುವವರು

ಸ್ಥಳ: ಮೈಸೂರು ಟಿ ನರಸೀಪುರ.

ದಿನಾಂಕ: 09/06/26

NOTARY
LINGANNA. N.L.
T. NARASIPURA
REVENUE TALUK
MYSURU DIST.

Solemnly Affirmed & Declared
Before me on 9/6/2026

**ಸಾಕ್ಷಿಗೆ ದಿನಾಂಕಃ 09.06.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆಃ ಶ್ರೀ. ಕೆ.ಎಸ್. ವಕೀಲರಿಂದಃ</u>**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

9/6/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**

T
L. M

ಸಿದ್ದನಾಯಕ